(8)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ರಾಜರಾಜೇಶ್ವರಿ ನಗರ ವಲಯ.

ಸಂ:ಕಾ.ಪಾ.ಅ(ವಿ)/ರಾರಾನವ/ಆ.ಮ/ 51 /19–20

ಕಾರ್ಯಪಾಲಕ ಅಭಿಯಂತರರು (ವಿದ್ಯುತ್)ರವರ ಕಛೇರಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ರಾಜರಾಜೇಶ್ವರಿ ನಗರ ವಲಯ.
ದಿನಾಂಕ: 09/01/2020

ಆಡಳಿತಾತ್ಮಕ ಮಂಜೂರಾತಿ ಜ್ಞಾಪನ ಪತ್ರ

ಕಾಮಗಾರಿಯ ಹೆಸರು: **Operation and maintenance of street lighting system in ward no-17, Package R2 of Rajarajeshwari Nagar Zone.**

ಅಂದಾಜು ಮೊತ್ತ: 24.40 ಲಕ್ಷಗಳು

ಉಲ್ಲೇಖ: ಮಾನ್ಯ ಆಯುಕ್ತರು, ಬಿ.ಬಿ.ಎಂ.ಪಿ ರವರ ಆದೇಶ ಸಂಖ್ಯೆ:ಪಿ.ಎಸ್.ಆರ್(ಜಿ)963, ದಿ:26.06.2019, ಕಂಡಿಕೆ ಸಂಖ್ಯೆ:(92)

***

ಈ ಮೇಲೆ ವಿವರಿಸಿರುವ ಕಾಮಗಾರಿಯ ಅಂದಾಜು ಮೊತ್ತ **ರೂ.24.40 ಲಕ್ಷಗಳ** ಅಂದಾಜು ಪಟ್ಟಿಗೆ ಉಲೇಖಿತ ಆದೇಶದಲ್ಲಿ ಮಾನ್ಯ ಆಯುಕ್ತರು, ಬಿ.ಬಿ.ಎಂ.ಪಿ ರವರು ಅನುಮೋದಿಸಿರುತ್ತಾರೆ. ಈ ನಿರ್ವಹಣಾ ಕಾಮಗಾರಿಯ ಅಂದಾಜು ಮೊತ್ತಕ್ಕೆ 2019–20 ನೇ ಸಾಲಿನ ಪಾಲಿಕೆ ಅನುಮೋದಿತ ಆಯವ್ಯಯದ ಲೆಕ್ಕಶೀರ್ಷಿಕೆ **P0300, M & R to street lights- Replacement of Burnt Bulbs etc(Package)** ರಡಿಯಲ್ಲಿ **ಜಾಬ್ ಸಂಖ್ಯೆ:017–20–000010** ದೊರಕಿರುತ್ತದೆ.

ಮಾನ್ಯ ಆಯುಕ್ತರು ರವರ ಕಛೇರಿ ಆದೇಶ ಸಂಖ್ಯೆ: ಬಿ12(1)ಪಿ.ಆರ್/394/2019–20, ದಿನಾಂಕ: 25/09/2019 ರಲ್ಲಿ ಕಾರ್ಯಪಾಲಕ ಅಭಿಯಂತರರಿಗೆ ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ ಅನುಮೋದನೆಯಾಗಿರುವ ಎಲ್ಲಾ ಮೊತ್ತದ ಅಂದಾಜು ಪಟ್ಟಿಗಳ ಆಡಳಿತಾತ್ಮಕ ಮಂಜೂರಾತಿ ಆದೇಶ ಹೊರಡಿಸಲು ಅಧಿಕಾರ ಪ್ರತ್ಯಾಯೋಜನೆಯ ಅನ್ವಯ ಸದರಿ ಆಡಳಿತಾತ್ಮಕ ಮಂಜೂರಾತಿ ಆದೇಶ ಪ್ರತಿಗೆ ಸಹಿ ಮಾಡಲಾಗಿದೆ. ಆಡಳಿತಾತ್ಮಕ ಮಂಜೂರಾತಿ ಪುಸ್ತಕದ ಪುಟ ಸಂಖ್ಯೆ 30&31 ರ ಕ್ರಮ ಸಂಖ್ಯೆ 51 ರಲ್ಲಿ ಈ ಕೆಳಗಿನ ಷರತ್ತುಗಳಿಗೊಳಪಟ್ಟು ದಾಖಲಿಸಲಾಗಿದೆ.

ಷರತ್ತುಗಳು:

1) ದರಪಟ್ಟಿ ಆಧಾರಿತವಲ್ಲದ ಅಂಶಗಳಿಗೆ ಡೆಟಾ ದರವನ್ನು ತಯಾರಿಸಿ ಅನುಮೋದನೆ ಪಡೆಯುವುದು.
2) ಅಂದಾಜು ಪಟ್ಟಿಯಲ್ಲಿ ಮಾರುಕಟ್ಟೆ ದರ ಅಳವಡಿಸಿಕೊಂಡಿರುವ ಅಂಶಗಳಿಗೆ ಕೊಟೇಶನ್ ಕರೆದು ಅನುಮೋದನೆ ಪಡೆಯುವುದು.
3) ಕೆಲಸದ ಸ್ಥಳದಿಂದ ಸಾಗಣೆ ದೂರಕ್ಕೆ ಅನುಮೋದನೆ ಪಡೆಯುವುದು.
4) ಮೇಲಿನ ಕೆಲಸದ ವೆಚ್ಚವನ್ನು ಉಪ ಅನುದಾನದಡಿಯಲ್ಲಿ ಭರಿಸುವುದು.
5) ವಿನ್ಯಾಸಗಳನ್ನು ಸಂಬಂಧಪಟ್ಟ ಮೇಲಾಧಿಕಾರಿಗಳಿಂದ ಅನುಮೋದಿಸಿಕೊಂಡು ಕಾರ್ಯಗತಗೊಳಿಸುವುದು.

ಕಾರ್ಯಪಾಲಕ ಅಭಿಯಂತರರು (ವಿದ್ಯುತ್),
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ರಾಜರಾಜೇಶ್ವರಿ ನಗರ ವಲಯ.

ಪ್ರತಿಯನ್ನು ಮಾಹಿತಿಗಾಗಿ ಸಲ್ಲಿಸಿದೆ.

1) ಪ್ರಧಾನ ಅಭಿಯಂತರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು. ರವರ ಮಾಹಿತಿಗಾಗಿ,
2) ಮುಖ್ಯ ಲೆಕ್ಕಾಧಿಕಾರಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು. ರವರ ಮಾಹಿತಿಗಾಗಿ,
3) ಮುಖ್ಯ ಅಭಿಯಂತರರು, ರಾಜರಾಜೇಶ್ವರಿ ನಗರ್ಳ ವಲಯ, ಬೃ.ಬೆಂ.ಮ.ಪಾ, ರವರ ಮಾಹಿತಿಗಾಗಿ,
4) ಕಛೇರಿ ಪ್ರತಿ